**ಓ.ಎಸ್ ನಂ. 214/2015**

**ಡಿ. ಡಬ್ಲ್ಯೂ: 1**

**ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 23-10-2025 ರಂದು ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಶ್ರೀ ವಿ ಎ ಟಿ ನ್ಯಾಯವಾದಿರವರಿಂದಃ</u>**

ನನ್ನ ತಂದೆಯವರು 4 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ನನ್ನ ತಂದೆಯವರು ಕನ್ನಡ ಮಾಧ್ಯಮದಲ್ಲಿ ಶಾಲೆ ಕಲಿತಿರುತ್ತಾರೆ. 1995 ನೇ ಸಾಲಿನಲ್ಲಿ ನನ್ನ ತಂದೆಯವರು ಮೃತರಾಗಿರುತ್ತಾರೆ. 1997 ನೇ ಸಾಲಿನಲ್ಲಿ ಅಸಲು ದಾವೆ ಸಂಖ್ಯೆ 172/2015 ರ ದಾವಾ ಆಸ್ತಿ ಸರ್ವೇ ನಂ.1370 ಅ/8 ರ ಆಸ್ತಿಯು ನನ್ನ ತಮ್ಮನಾದ ಶ್ರೀಧರ ಹರಿಕಂತ್ರ ಇವರ ಹೆಸರಿನಲ್ಲಿ ವಾರಸಾ ಹಕ್ಕಿನಂತೆ ವರ್ಗಾವಣೆ ಅಗಿದ್ದು , ಆ ಪ್ರಕಾರ ಕಂದಾಯ ದಾಖಲೆಗಳಲ್ಲಿ ಎಂಇ ಸಂಖ್ಯೆ ಎ 2150 ರಂತೆ ನನ್ನ ತಮ್ಮನ ಹೆಸರು ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲಾ. ವಾರಸಾ ಶೇಜ್ ಪ್ರಕಾರ ತಹಶೀಲ್ದಾರ ಕಚೇರಿಯಲ್ಲಿ ನಾನು ಮತ್ತು 2 ನೇ ಪ್ರತಿವಾದಿಯು ನಮ್ಮ ತಮ್ಮ ವಾದಿಯ ಗಂಡ ಶ್ರೀಧರ ಹರಿಕಂತ್ರನಿಗೆ ಹಕ್ಕು ಬಿಟ್ಟುಕೊಟ್ಟ ಪ್ರಕಾರ ಆತನ ಹೆಸರು ಸ.ನಂ.1370 ಅ/8 ರ ಆಸ್ತಿಯ ಕಂದಾಯ ದಾಖಲೆಗಳಲ್ಲಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಒಂದು ವೇಳೆ ನಾವು ಸದರಿ ಆಸ್ತಿಯಲ್ಲಿ ಯಾವುದೇ ಹಕ್ಕನ್ನು ಬಿಟ್ಟುಕೊಟ್ಟಿದ್ದದಿದ್ದರೆ ನಮ್ಮ ಹೆಸರು ಸಹ ಕಂದಾಯ ದಾಖಲೆಯಲ್ಲಿ ನಮೂದು ಆಗುತ್ತಿತ್ತು ಎಂದರೆ ಸರಿಯಲ್ಲ. ಒಂದು ವೇಳೆ ನಾವು ಸದರಿ ಆಸ್ತಿಯಲ್ಲಿನ ನಮ್ಮ ಹಕ್ಕನ್ನು ಬಿಟ್ಟುಕೊಟ್ಟಿಲ್ಲದಿದ್ದರೆ ನಮ್ಮ ತಮ್ಮನ ಹೆಸರು ಕಂದಾಯ ದಾಖಲೆಗಳಲ್ಲಿ ಅ.ಕು.ಮೆ.ನಾತೆಯಿಂದ ದಾಖಲಾಗುತ್ತಿರಲಿಲ್ಲಾ ಎಂದರೆ ಸರಿ. ನಾನು ಈ ದಾವೆಯ ದಾವಾ ಆಸ್ತಿಯ ಕಂದಾಯ ದಾಖಲೆಗಳಲ್ಲಿ ನಮ್ಮ ಹೆಸರನ್ನು ಯಾವಾಗ ವರ್ಗಾವಣೆ ಮಾಡಿಕೊಂಡಿರುತ್ತೇನೆ ಎಂಬುದು ನನಗೆ ನೆನಪಿರುವುದಿಲ್ಲಾ.

ನನ್ನ ತಂದೆಯವರು ಕನ್ನಡದಲ್ಲಿ ಸಹಿ ಮಾಡುತ್ತಾರೆ ಎಂದರೆ ಸರಿ. ನನ್ನ ತಂದೆಯು ಯಾವತ್ತೂ ನೀಲಕಂಠ ಬೀರಾ ಹರಿಕಂತ್ರ ಎಂದೇ ದಾಖಲೆಗಳಲ್ಲಿ ಸಹಿ ಮಾಡುತ್ತಾರೆ ಎಂದರೆ ಸರಿ. ನಿಡಿ.1 ರಲ್ಲಿನ ಸಹಿಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಿ ಅದು ತಮ್ಮ ತಂದೆಯ ಸಹಿ ಎಂದು ಸಾಕ್ಷ್ಯ ನುಡಿದಿದ್ದರಿಂದ ಸದರಿ ಸಹಿಯನ್ನು ನಿಡಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ವಿಲ್

ನಾಮೆಯಲ್ಲಿ ತನ್ನ ಸಹಿಯನ್ನು ತೋರಿಸಲಾಗಿ, ಸದರಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸದರಿ ಸಹಿಯನ್ನು ನಿಡಿ.5 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು)**

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ,**

**ಸಿವಿಲ್ ನ್ಯಾಯಾಧೀಶರು ಕಾರವಾರ**